ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಪ್ರಗತಿ

2801 (3666) ಶ್ರೀ ಬಿ.ಎನ್. ಬಚ್ಚೇಗೌಡ (ಹೊಸಕೋಟೆ):- ಮಾನ್ಯ ಮೂಲ ಸೌಲಭ್ಯ ಅಭ್ಯರ್ಥಿ ಮತ್ತು ನಾಗರೀಕ ವಿಮಾನಯಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ದೇವನಹಳ್ಳಿಯಲ್ಲಿ ಸ್ಥಾಪಿಸುವ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಪ್ರಗತಿ ಯಾವ ಹಂತದಲ್ಲಿದೆ?

ಆ) ಜಮೀನಿನ ಸ್ವಾಧೀನ ಪ್ರಕ್ರಿಯೆ ಪ್ರಾರಂಭವಾಗಿದೆಯೆ ಒಟ್ಟು ಎಷ್ಟು ಎಕರೆ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ. ಜಮೀನು ಕಳೆದುಕೊಳ್ಳುವ ರೈತರಿಗೆ ಕೊಡುವ ಪರಿಹಾರದ ಹಣ ಎಷ್ಟು?

ಇ) ರಾಜ್ಯ ಸರ್ಕಾರದ ಷೇರು ಬಂಡವಾಳವೆಷ್ಟು ಹಾಗೂ ಕೇಂದ್ರ ಸರ್ಕಾರದ ಪಾಲು ಪಾತ್ರ ಏನು?

ಈ) ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ನಿರ್ಮಾಣ ಮಾಡಲು ಕೇಂದ್ರ ಸರ್ಕಾರ ಮತ್ತು ಪರಿಸರ ಇಲಾಖೆಯಿಂದ ಅಂತಿಮ ಅನುಮತಿ ದೊರೆತಿದೆಯೆ?

ಉ) ಹಾಗಿದ್ದಲ್ಲಿ ಈ ಕಾಮಗಾರಿ ವಿಳಂಬ ಆಗುತ್ತಿರಲು ಕಾರಣವೇನು? ನವೆಂಬರ 1ಕ್ಕೆ ಶಂಕು ಸ್ಥಾಪನೆ ಮಾಡುವ ಉದ್ದೇಶವಿದೆಯೇ ಅಥವಾ ಮುಂದೂಡಲಾಗಿದೆಯೆ?

ಊ) ಈ ವಿಮಾನ ನಿಲ್ದಾಣವನ್ನು ನಿರ್ಮಾಣ ಮಾಡಲು ಎಷ್ಟು ಜನ ಬಿಲ್ಡರ್ಸ್ ಮುಂದೆ ಬಂದಿದ್ದಾರೆ, ಇವರುಗಳ ಹೆಸರೇನು ಮತ್ತು ಇವರು ಹಾಕಿರುವ ಷರತ್ತುಗಳೇನು?

ಶ್ರೀ ಟಿ.ಜಾನ್ (ಮೂಲ ಸೌಲಭ್ಯ ಅಭಿವೃದ್ಧಿ ಹಾಗೂ ನಾಗರೀಕ ವಿಮಾನಯಾನ ರಾಜ್ಯ ಸಚಿವರು) :-

ಅ) ಎಎಐ ಮತ್ತು ಕೆ ಎಸ್ ಐಐಡಿಸಿ ಜೊತೆಗೆ ಜಂಟಿ ವಲಯದ ಪಾಲುದಾರರನ್ನು ಆಯ್ಕೆಮಾಡುವ ಪ್ರಕ್ರಿಯೆಯು ನಡೆಯುತ್ತಿದೆ.

ಆ) ಹೌದು ಸುಮಾರು 4276 ಎಕರೆ ಜಮೀನನ್ನು ಗುರುತಿಸಲಾಗಿದೆ. ಇದರಲ್ಲಿ ಸುಮಾರು 1803 ಎಕರೆಯಷ್ಟು ಸರ್ಕಾರಿ ಜಮೀನು(ಅರಣ್ಯ ಜಮೀನನ್ನು ಒಳಗೊಂಡು), ಉಳಿದ 2473 ಎಕರೆ ಖಾಸಗೀ ಜಮೀನಾಗಿರುತ್ತದೆ. ಇತ್ತೀಚೆಗೆ ಕೆಐ ಎಡಿಬಿನ ವಿಶೇಷ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಮತ್ತು ಬೆಂಗಳೂರು ನಗರ ಹಾಗೂ ಇತರೆ ಉನ್ನತ ಅಧಿಕಾರಿಗಳು ಹಾಗೂ ಭೂ ಒಡೆಯರೊಂದಿಗೆ ಜರುಗಿದ ಸಭೆಯೊಂದರಲ್ಲಿ ಎಕರೆ ಒಂದಕ್ಕೆ ಸರಾಸರಿ ರೂ. 5 ಲಕ್ಷ ಪರಿಹಾರ ಧನವನ್ನು ನೀಡಲು ತೀರ್ಮಾನಿಸಲಾಗಿದೆ.

ಇ) ಎ ಎ ಐ, ಕೆ ಎಸ್ ಐಐಡಿಸಿ ಹಾಗೂ ಒಬ್ಬ ಜಾಕತಿಕ ಪಾಲುದಾರರನ್ನು ಪ್ರಮುಖ ಪ್ರವರ್ತಕರಾಗಿ ಹೊಂದಿರುವ ಒಂದು ಜಂಟಿ ವಲಯ ಕಂಪನಿಯನ್ನು ಸ್ಥಾಪಿಸಲು ಎ ಎಂ ಮತ್ತು ಕೆಎಸ್ ಐಡಿಸಿ

ಒಂದು ಪ್ಲಾನ್ ಒಪ್ಪಂದ ಮಾಡಿಕೊಂಡಿವೆ. ಎ ಎಐ ಮತ್ತು ಕೆ ಎಸ್ ಐಐಡಿಸಿ ಜೊತೆಯಾಗಿ ಶೇ. 26 ರಷ್ಟು ಈಕ್ವಿಟಿ ಹೊಂದಿರುತ್ತವೆ. ಹಾಗೂ ಉಳಿದ ಶೇ. 74ರಷ್ಟು ಅನ್ನು ಜಂಟಿ ವಲಯ ಪಾಲುದಾರರ ಸಮೂಹವು ಹೊಂದಿರುತ್ತದೆ.

ಈ) ಕೇಂದ್ರ ಸರ್ಕಾರ ಅನುಮೋದನೆ ಪಡೆಯಲಾಗಿದೆ ಪರಿಸರ ಹಾಗೂ ಅರಣ್ಯ ಸಚಿವಾಲಯಗಳ ಅನುಮೋದನೆ ಪಡೆಯಬೇಕಿದೆ.

ಉ) ಹೊಸ ವಿಮಾನ ನಿಲ್ದಾಣ ಕಾರ್ಯದಲ್ಲಿ ಯಾವುದೇ ವಿಳಂಬವಿಲ್ಲ. ನಿರ್ಮಾಣ ಕಾರ್ಯವು ಜಂಟೀವಲಯ ಪಾಲುದಾರರು ಆಯ್ಕೆಯಾದ ಕೂಡಲೇ ಪ್ರಾರಂಭಿಲಾಗುವುದು. ಆದಾಗ್ಯೂ ಕೇಂದ್ರ ಸರ್ಕಾರವು ಯೋಗ್ಯ ಅನುಮತಿಗಳನ್ನು ನೀಡುವಲ್ಲಿ ಸ್ವಲ್ಪ ವಿಳಂಬವಾಗಿದೆ. ಜಂಟಿವಲಯ ಪಾಲುದಾರರನ್ನು ಆಯ್ಕೆ ಮಾಡಿದ ನಂತರ ಹಾಗೂ ಎಲ್ಲಾ ಅಗತ್ಯ ಪರಿಸರ ಅನುಮತಿ ಪಡೆದ ನಂತರ ಶಂಕುಸ್ಥಾಪನೆ ಮಾಡಲಾಗುವುದು.

ಊ) ಈ ಕೆಳಕಂಡ ಏಳು ಕಂಪನಿಗಳು ಬಿಡ್ಡಿಂಗ್‌ನ ಮೊದಲ ಹಂತದ ಪರಿಶೀಲನೆಯಲ್ಲಿ ಅರ್ಹವಾಗಿದ್ದವು

1. ಎಬಿಬಿ 'ಏರ್‌ಪೋರ್ಟ್ ಟೆಕ್‌ನಾಲಜೀ, ಜಿ ಎಂಬಿಹೆಚ್ ಜರ್ಮನಿ.

2. ಬಿಎ ಎ ಇಂಟರ್ ನ್ಯಾಷನಲ್ ಲಿಮಿಟೆಡ್ ಯುಕೆ

3. ಬೆಕ್ಟಲ್ ಎಂಟರ್ ಪ್ರೈಸಸ್ ಇಂಟರ್ ನ್ಯಾಷನಲ್(ಲಿ) ಕೇಮನ್ ಐ ಲ್ಯಾಂಡ್.

4. ಹಾಕ್ಟಿಫ್, ಏರ್ ಸ್ಪೋರ್ಟ್ ಜಿಎಂಬಿಹೆಚ್, ಜರ್ಮನಿ.

5. ರಿಲೆಯನ್ಸ್ ಇಂಡಸ್ಟ್ರೀಸ್ ಲಿ. ಇಂಡಿಯಾ.

6. ಶಿಷೋಲ್ (ಏಶ್ಯಾ) ಎಸ್ ಡಿ ಎನ್ ಬಿಹೆಚ್ ಡಿ, ಮಲೇಶಿಯಾ

7. ಸೀಮನ್ಸ್ ಎಜಿ, ಜರ್ಮನಿ

(ಈ ಮೇಲ್ಕಂಡ 7 ಕಂಪನಿಗಳಲ್ಲಿ ಕೆಳಕಂಡ 2 ಕಂಪನಿಗಳು ಕಣದಲ್ಲಿ ಉಳಿದಿವೆ)

1. ಹಾಕ್ಟಿಫ್ ಏರ್‌ಪೋರ್ಟ್ ಜಿಎಂಬಿಎಡ್, ಜರ್ಮನಿ

2. ಸೀಮನ್ಸ್ ಎಜಿ. ಜರ್ಮನಿ

ಆಯ್ಕೆ ಕಾರ್ಯಾಚರಣೆಯು ಇನ್ನೂ ನಡೆಯುತ್ತಿದೆ.

ಸರ್ಕಾರಿ ನೌಕರರ ವರ್ಗಾವಣಾ ಮಾರ್ಗಸೂಚಿ

2802(3721) ಶ್ರೀ ಬಿ.ಎನ್. ಬಚ್ಚೇಗೌಡ (ಹೊಸಕೋಟೆ):- ಮಾನ್ಯ ಮುಖ್ಯಮಂತ್ರಿಯವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?